ಬರದೇ ಇರಬಹುದು. ಇದುವರೆಗೂ ಕೊಡಸಳ್ಳಿಯಲ್ಲಿ ರಿಹ್ಯಾಬಿಲಿಟೇಷನ್ ಆಗಲಿಲ್ಲ. ಇದಕ್ಕಾಗಿ ಜನರು ನಮಗೆ ಗದ್ದಲವನ್ನು ಮಾಡುತ್ತಿದ್ದಾರೆ. ರಿಹ್ಯಾಬಿಲಿಟೇಷನ್ ಅನ್ನು ಮಾಡುವುದಿಲ್ಲ. ಈ ಜನರಿಗೆ ನಾವು ಯಾವ ರೀತಿ ಉತ್ತರವನ್ನು ಕೊಡಬೇಕು ಅದಕ್ಕೆ ಸರ್ಕಾರ ನಮಗೆ ನಿಲುವನ್ನು ಹೇಳಬೇಕು.

ಕೊಡಸಹಳ್ಳಿ ರಿಹ್ಯೆಬಿಲಿಟೇಷನ್ ಅನ್ನು ಇಷ್ಟು ದಿವಸದಲ್ಲಿ ಮುಗಿಸುತ್ತೇವೆ. ಆ ಕೆಲಸವನ್ನು ಕೈಗೆ ತೆಗೆದುಕೊಳ್ಳುವ ಬಗ್ಗೆ ವಿಚಾರವನ್ನು ಕೂಡ ಸರ್ಕಾರದವರು ಹೇಳಬೇಕು. ನಾನು ಮತ್ತೊಮ್ಮೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಬೇಡ್ತಿ ಯೋಜನೆಯನ್ನು ತಾವು ಮಾಡುವುದಿಲ್ಲ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳುತ್ತೀರೆಂದು ತಿಳಿದುಕೊಂಡು ನನಗೆ ಸಮಯ ಕೊಟ್ಟ ಬಗ್ಗೆ ತಮಗೆ ಧನ್ಯವಾದಗಳನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ 'ನಾಗರಾಜ್':– ಕಾಲರ ಬಗ್ಗೆ ಬೆಳಿಗ್ಗೆ ಹೇಳಿದ್ದರು ಸಾಯಂಕಾಲ ಕೊಡುತ್ತೇವೆಂದು. ಅದನ್ನು ಕೊಡಿಸಿಕೊಡಿ.

ಸಚಿವರಿಂದ ಹೇಳಿಕೆ

ಮೈಸೂರು ನಗರ ಮತ್ತು ಇತರೆ ಪ್ರದೇಶಗಳಲ್ಲಿ ಅತಿಸಾರ ಪ್ರಕರಣಗಳು ಮತ್ತು ಅದರ ನಿಯಂತ್ರಣ

† ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿ ಮತ್ತು ಇತರೆ ಪ್ರದೇಶಗಳಲ್ಲಿ ಅತಿಸಾರ ಪ್ರಕರಣಗಳ ಮತ್ತು ನಿಯಂತ್ರಣ ಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಮೈಸೂರು ನಗರದಲ್ಲಿ 1ನೇ ಜನವರಿಯಿಂದ ಇಲ್ಲಿಯವರೆವಿಗೂ 745 ಅತಿಸಾರ ಪ್ರಕರಣಗಳು ಮತ್ತು 28 ಮರಣಗಳು ಸಂಭವಿಸಿವೆ. ಈ ಕಾಯಿಲೆಗಳು ಫೆಬ್ರವರಿ 3ನೇ ವಾರದಿಂದ ಉಲ್ಬಣಿಸಿತ್ತು ಮತ್ತು ಮೈಸೂರು ತಾಲ್ಲೂಕುಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಈ ಕಾಯಿಲೆಗಳು ಕಾಣಿಸಿಕೊಂಡಿದ್ದು, ಇಲ್ಲಿಯವರೆವಿಗೂ 594 ಪ್ರಕರಣಗಳು ಮತ್ತು 19 ಮರಣಗಳು ಸಂಭವಿಸಿದೆ. ಒಟ್ಟಾಗಿ ಮೈಸೂರು ಜಿಲ್ಲೆಯಲ್ಲಿ 1359 ಅತಿಸಾರ ಪ್ರಕರಣಗಳು ಮತ್ತು 47 ಮರಣಗಳು ದಿನಾಂಕ: 14–3–93ರಿಂದ ಕಾಣಿಸಿಕೊಂಡಿದೆ.

ಈಗ ಮೂರು ದಿನಗಳಿಂದ ಎಂದರೆ ದಿನಾಂಕ: 12, 13ಮತ್ತು 14ನೇ ತಾರೀಖಿನಲ್ಲಿ ಮರಣಗಳು ವರದಿಯಾಗಿಲ್ಲ.

ಮೈಸೂರು ನಗರದಲ್ಲಿ ಈ ಖಾಯಿಲೆಗಳ ಚಿಕಿತ್ಸೆ ಮಾಡಲು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ವಹಿಸಿಕೊಂಡಿದೆ. ಈ ಆಸ್ಪತ್ರೆಯ ಸಿಬ್ಬಂದಿ ಈ ಕೆಳಗಿನಂತೆ ಇದೆ.

1. ಶಸ್ತ್ರ ಚಿಕಿತ್ಸಕರು	:1
2. ಸಹಾಯಕ ಶಸ್ತ್ರ ಚಿಕಿತ್ಸಕರು	:1
3. ಶುಶ್ರೂಷಾ ದಾದಿಯರು	:2
4. ಗ್ರೂಪ್ – ಡಿ	:9

ಈಗ ಈ ಖಾಯಿಲೆಗಳ ತೀವ್ರತೆಯಿಂದ ದಿನಾಂಕ: 10–3–93ರಿಂದ 19 ಸಹಾಯಕ ಶಸ್ತ್ರ ಚಿಕಿತ್ಸಕರನ್ನು, 26 ಶುಶ್ರೂಷಾ ದಾದಿಯವರನ್ನು ಮತ್ತು 18 ಗ್ರೂಪ್ – ಡಿ ನೌಕರರನ್ನು ಇತರೇ ಆಸ್ಪತ್ರೆಗಳಿಂದ ನಿಯೋಜಿಸಲಾಗಿದೆ. ಈ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ 40. ಈಗ ಮತ್ತೆ 60

ಹಾಸಿಗೆಗಳನ್ನು ನಿಯೋಜಿಸಲಾಗಿದೆ. ಇದೂ ಅಲ್ಲದೆ ನಗರದ ಆಸ್ಪತ್ರೆಯಾದ ಕೆ.ಆರ್. ಆಸ್ಪತ್ರೆಯಲ್ಲಿ ಕೂಡ ಹೆಚ್ಚಾಗಿ 60 ಹಾಸಿಗೆಗಳನ್ನು ಈ ಖಾಯಿಲೆಗಳ ಪ್ರಕರಣಗಳ ಚಿಕಿತ್ಸೆಗಾಗಿ ನಿಯೋಜಿಸಲಾಗಿದೆ.

ಈ ಕಾಯಿಲೆ ಹರಡಲು ಶುರುವಾದಾಗಿನಿಂದ ಇಲ್ಲಿಯವರೆವಿಗೂ ಮೈಸೂರು ನಗರದಲ್ಲಿ 1,10,000 ಜನರಿಗೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 24,000 ಜನರಿಗೆ ಕಾಲರಾ ಚುಚ್ಚುಮದ್ದನ್ನು ಕೊಡಲಾಗಿದೆ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳ ಹತ್ತಿರ 50,000 ಚುಚ್ಚು ಮದ್ದು ಮತ್ತು ಕಾರ್ಪೋರೇಷನ್‌ನಲ್ಲಿ 2 ಲಕ್ಷ ಡೋಸ್ ಚುಚ್ಚುಮದ್ದು ಇದ್ದು, ಈ ಚುಚ್ಚುಮದ್ದು, ಕೊಡುವ ಕ್ರಮ ಭರದಿಂದ ಸಾಗಿದೆ ಮತ್ತು ಇನ್ನು ಬೇಕಾಗುವ ಚುಚ್ಚುಮದ್ದುಗಳನ್ನು ಬೆಂಗಳೂರು ಸಾರ್ವಜನಿಕ ಆರೋಗ್ಯ ಸಂಸ್ಥೆಯಿಂದ ಮತ್ತು ಇತರೇ ರಾಜ್ಯಗಳಿಂದ ಕೂಡ ತರಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಈ ಕಾಯಿಲೆಗಳ ಪ್ರಕರಣಗಳ ಚಿಕಿತ್ಸೆಗಾಗಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯವರ ಆಯವ್ಯಯದಲ್ಲಿ ಮಂಡಿಸಿರುವ ಗಾತ್ರಕ್ಕೂ ಹೆಚ್ಚಾಗಿ ಈ ಕೆಳಗೆ ತೋರಿಸಿದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಕೊಡಲಾದ ಔಷಧಿಗಳು

1. ಡಿಸ್ಟ್ರೋ ಸೋಲೈನ್	– 3,800 ಪಾಜೆಟ್ಸ್
2. ನಾರ್ಮಲ್ ಸೊಲೈನ್	– 2,900 "
3. ಡೆಸ್ಟ್ರೋಸ್ 5	– 1,290 "
4. ಮೆಟ್ರೋಜಿಲ್	– 450 ವಾಯಲ್ಸ್
5. ಬೆಟ್ನೋನೈಲ್	– 200 ಆಂಪಲ್ಸ್
6. ಒ.ಆರ್.ಎಸ್	– 600 ಪ್ಯಾಕೆಟ್ಸ್
7. ಟೆಟ್ರಾಸೈಕ್ಲಿನ್	– 28,000 ಕ್ಯಾಪ್ಸೂಲ್ಸ್
8. ರಿಂಗ್ಲರ್ ಲೊಕ್ಟೇಟ್ ಸೆಲೂಷನ್	– ಪಾಚೆಟ್ಸ್
9. ಬ್ಲೀಚಿಂಗ್ ಪೌಡರ್	– 560 ಕೆ.ಜಿ.
10. ಪೆನ್ಸೈಲ್	– 1000 ಲೀಟರ್ಸ್

ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಕೊಡಲಾದ ಔಷಧಿಗಳು

1. ಬ್ಲೀಚಿಂಗ್ ಪೌಡರ್	– 200 ಕೆ.ಜಿ.
2. ರಿಂಗರ್ ಲೊಕ್ಟೇಟ್	– 175 ಪಾಜೆಟ್ಸ್
3. ಡೆಕ್ಸ್‌ಟ್ರೋಸ್ 5	– 375 "
4. ಒ.ಆರ್.ಎಸ್.ಪ್ಯಾಕೆಟ್ಸ್	– 18,275

ಈ ಔಷಧಿಗಳ ಪೂರೈಕೆ ಆದ ಮೇಲೆ ಇನ್ನೂ ಹೆಚ್ಚು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ವಾಣಿವಿಲಾಸ ವಾಟರ್ ಸಪ್ಲೈ ಸ್ಟೇಷನ್‌ನಲ್ಲಿ ಇರುವ ದಾಖಲೆಗಳನ್ನು ನೋಡಿದಾಗ ಈ ನೀರಿನಲ್ಲಿ ಕಾಲಿಫಾರ್ಮ್ ಕ್ರಿಮಿಗಳು ಬಹಳಷ್ಟು ಕಡೆ ಅಧಿಕವಾಗಿ ಕಂಡು ಬಂದಿದ್ದು ಗೊತ್ತಾಗಿದೆ. ಈ ಕ್ರಿಮಿಗಳ ಹೆಚ್ಚಾಗಿ ಕಂಡು ಬಂದ ಸ್ಥಳಗಳಲ್ಲಿ ಮಂಡಿ ಮೊಹಲ್ಲಾ ಮತ್ತು ಲಷ್ಕರ್ ಮೊಹಲ್ಲಾ ಮತ್ತು ಇತರೇ ಸ್ಥಳಗಳು ಸೇರಿವೆ. ಈ ಸ್ಥಳಗಳಲ್ಲಿ ಅತಿಸಾರ ಪ್ರಕರಣಗಳು ಹೆಚ್ಚಾಗಿ ವರದಿಯಾಗಿದೆ. ಇಷ್ಟಾದರೂ ಕೂಡ ಈ ವಾಣಿ ವಿಲಾಸ ನೀರು ಸರಬರಾಜು ಘಟಕ ಈ ಕಾಲಿಫಾರ್ಮ್ ಕ್ರಿಮಿಗಳ ಬಗ್ಗೆ ಮೈಸೂರು

ನಗರಪಾಲಿಕೆಗೆ ತಿಳಿಸಿರುವುದಿಲ್ಲ ಮತ್ತು ಮೈಸೂರು ನಗರಪಾಲಿಕೆ ಆರೋಗ್ಯ ವಿಭಾಗ ಮತ್ತು ಕರ್ನಾಟಕ ನೀರು ಸರಬರಾಜು ಸಂಸ್ಥೆ ಇವೆರಡರಲ್ಲಿ ಹೊಂದಾಣಿಕೆ ಇಲ್ಲದಿರುವುದು ತಿಳಿದು ಬಂದು ಸುಮಾರು 15 ದಿವಸಗಳವರೆಗೆ ಯಾವ ವಿಧವಾದ ನಿಯಂತ್ರಣ ಕ್ರಮಗಳನ್ನು ಈ ಎರಡು ಸಂಸ್ಥೆಗಳು ತೆಗೆದುಕೊಂಡಿರುವುದಿಲ್ಲ ಹಾಗೂ ಇದರಿಂದ ಖಾಯಿಲೆ ನಿಯಂತ್ರಣ ಕ್ರಮ ತಡವಾಗಿ ಶುರುವಾಗಿದ್ದು, ಅಧಿಕ ಮರಣಗಳು ಸಂಭವಿಸುವುದಕ್ಕೆ ಇದೊಂದು ಕಾರಣವಾಗಿದೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯನ್ನು ಮಾಡುವುದಕ್ಕಾಗಿ ಅಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರನ್ನು ನಿಯೋಜಿಸಿದ್ದೇನೆ ಮತ್ತು ಮೈಸೂರು ನಗರಪಾಲಿಕೆಯ ಆಯುಕ್ತರನ್ನು ಕೂಡಲೇ ಜಾರಿಗೆ ಬರುವಂತೆ ವರ್ಗ ಮಾಡಿದ್ದೇನೆ. ಹಾಗೂ ಮೈಸೂರು ನಗರಪಾಲಿಕೆಯ ಆರೋಗ್ಯಾಧಿಕಾರಿ ಡಾ: ತಿಮ್ಮಯ್ಯ ಇವರನ್ನು ಅಮಾನತ್ತಿನಲ್ಲಿ ಇಡುವುದಕ್ಕೆ ಆಜ್ಞಾಪಿಸಿದ್ದೇನೆ ಹಾಗೂ ಕರ್ನಾಟಕ ನೀರು ಸರಬರಾಜು ಸಂಸ್ಥೆಯ ವಾಣಿ ವಿಲಾಸ ನೀರು ಸರಬರಾಜು ಘಟಕದ ಮುಖ್ಯಸ್ಥರಾದ ಶ್ರೀ ಹೊನ್ನೇಗೌಡರನ್ನು ಕೂಡ ಅಮಾನತ್ತಿನಲ್ಲಿ ಇಡಲು ಆಜ್ಞಾಪಿಸಿದ್ದೇನೆ.

ಈಗ ಬರುವ ಬೇಸಿಗೆಯಲ್ಲಿ ಇಂತಹ ಪ್ರಕರಣಗಳು ಎಲ್ಲಾ ಜಿಲ್ಲೆಗಳಲ್ಲಿಯೂ ಬರುವ ಸಂಭವವಿದೆ. ಇದನ್ನು ಹತೋಟಿಗೆ ತರಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶನ ನೀಡಿದ್ದೇನೆ.

1. ಎಲ್ಲಾ ಜಿಲ್ಲಾಧಿಕಾರಿಗಳು ಮೈಸೂರು ಪಬ್ಲಿಕ್ ಹೆಲ್ತ್ [illegible] 46ನ್ನು ಚಲಾಯಿಸಿ ಅದರಂತೆ ಸೂಕ್ತ ಕ್ರಮಗಳನ್ನು ಎಲ್ಲಿ ಅವಶ್ಯಕ ಇದೆಯೋ ಅಲ್ಲಿ [illegible] ಳ್ಳುವುದಕ್ಕೆ ನಿರ್ದೇಶನ ಕೊಡುವುದು.

2. ಕಾಲರಾ ಲಸಿಕೆ ಮತ್ತು ಅತಿಸಾರ ಮತ್ತು ಕಾಲರಾ ಪ್ರಕ[illegible] ಚಿಕಿತ್ಸೆಗಾಗಿ ಬೇಕಾಗುವ ದ್ರಾವಣಗಳು, ಔಷಧಿಗಳು, ಓ.ಆರ್.ಎಸ್. ಪ್ಯಾಕೆಟ್ಸ್ ಮತ್ತು ಇತರ [illegible]ಗ್ರಿಗಳನ್ನು ಎಲ್ಲಾ ಜಿಲ್ಲಾ ಆರೋಗ್ಯ ಅಧಿಕಾರಿಗೂ ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳುವುದು.

3. ನಗರಗಳಲ್ಲಿ ನೀರಿನ ಶುದ್ಧೀಕರಣ ಮತ್ತು ಕ್ಲೋರೋನೇಷನ್ ವ್ಯವಸ್ಥೆ[illegible] ನಗರಪಾಲಿಕೆಯ ಆಯುಕ್ತರು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಚಿಕ್ಕ ಪುಟ್ಟ ನಗರ[illegible] ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನೀರು[illegible]ರಣ ಮತ್ತು ಕ್ಲೋರೋನೇಷನ್ ಬಗ್ಗೆ ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಕ್ರಮ[illegible]ಳ್ಳುವುದು. ಹಾಗೂ ಎಲ್ಲಾ ಜಿಲ್ಲಾ ಆರೋಗ್ಯ ಅಧಿಕಾರಿಗಳು ಅತಿಸಾರ ಮತ್ತು ಕಾಲರಾ [illegible]ಯಂತ್ರಣದ ಎಲ್ಲಾ ಕ್ರಮಗಳನ್ನು ಸಕಾಲದಲ್ಲಿ ತ್ವರಿತವಾಗಿ ತೆಗೆದುಕೊಳ್ಳುವ ಬಗ್ಗೆ ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ಕೊಡುವುದು ಮತ್ತು ಇದನ್ನು ಉಲ್ಲಂಘನೆ ಮಾಡಿದವರ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.

ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಗಳಲ್ಲಿ ಕೂಡ ಅತಿಸಾರ ಪ್ರಕರಣಗಳು ವರದಿಯಾಗಿದ್ದು, ದಿ: 1-3-93ರಿಂದ ಇಲ್ಲಿಯವರೆಗೆ 221 ಪ್ರಕರಣಗಳು, 5 ಮರಣಗಳು ಸಂಭವಿಸಿವೆ. ಮುಖ್ಯವಾಗಿ ಚಿತ್ರದುರ್ಗ ತಾಲ್ಲೂಕಿನಲ್ಲಿ 143ಪ್ರಕರಣಗಳು, 4ಮರಣಗಳು, ದಾವಣಗೆರೆಯಲ್ಲಿ 44ಪ್ರಕರಣಗಳು, ಒಂದು ಮರಣ ಹಾಗೂ ಇತರ ತಾಲ್ಲೂಕಿನಲ್ಲಿ ಪ್ರಕರಣಗಳು ವರದಿಯಾಗಿವೆ. 7 ಪ್ರಕರಣಗಳನ್ನು ದಾವಣಗೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೇರಿಸಲಾಗಿದೆ. ಅದರಲ್ಲಿ ಒಂದು ಮರಣವಾಗಿದೆ ಹಾಗೂ ನಿಯಂತ್ರಣ ಕ್ರಮಗಳನ್ನು ತಕ್ಷಣವೇ ತೆಗೆದುಕೊಳ್ಳಲಾಗಿದೆ. ಇಲ್ಲಿಯವರೆಗೂ 10 ಸಾವಿರ ಜನಕ್ಕೆ ಚುಚ್ಚುಮದ್ದು ಕೊಟ್ಟಿದ್ದು, ಹಾಗೂ ನೀರಿನ ಶುದ್ಧೀಕರಣ ಮತ್ತು ಕ್ಲೋರೋನೇಷನ್, ಪರಿಸರ ನೈರ್ಮಲ್ಯ ಕ್ರಮದ ಬಗ್ಗೆ ಮತ್ತು ಈ ಪ್ರಕರಣಕ್ಕೆ ಬೇಕಾದ ಔಷಧಿಗಳನ್ನು ಕೂಡ ಆರೋಗ್ಯ ಮತ್ತು ಕುಟುಂಬ ಕಲ್ಯಾಣ [illegible]ದ ಸರಬರಾಜು ಮಾಡಲಾಗಿದೆ

ಈ ಹಿಂದೆ ತಾ: 10–2–93 ರಲ್ಲಿ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರುಗಳಿಗೆ ಮತ್ತು ನಗರಸಭೆಯ ಆಯುಕ್ತರುಗಳಿಗೆ ಶುದ್ಧ ನೀರು ಸರಬರಾಜು ಮಾಡುವ ಬಗ್ಗೆ ಹಾಗೂ ನಗರದಲ್ಲಿ ನೈರ್ಮಲ್ಯ ಕಾಪಾಡಿಕೊಂಡು ಕಾಲರಾ ರೋಗ ಸೋಂಕದಂತೆ ಮತ್ತು ಹಬ್ಬದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕೆಂದು ಇಲಾಖೆಯ ಆಯುಕ್ತರು ಸ್ಪಷ್ಟವಾಗಿ ಸೂಚಿಸಿರುತ್ತಾರೆ.

ಯಾವುದಾದರೂ ನಗರಸಭೆ ಮತ್ತು ಮಹಾನಗರ ಪಾಲಿಕೆಗಳು ನೀರನ್ನು ಸರಿಯಾದ ರೀತಿಯಲ್ಲಿ ಕ್ಲೋರಿನೇಟ್ ಮಾಡಿಸದೆ ಮತ್ತು ಶುದ್ಧೀಕರಿಸದೆ ಸರಬರಾಜು ಮಾಡುವುದು ಕಂಡು ಬಂದರೆ ಅಂತಹ ನಗರಸಭೆ ಮತ್ತು ಮಹಾನಗರಪಾಲಿಕೆಗಳಿಗೆ ಕೊಡುವ ಅನುದಾನವನ್ನು ತಕ್ಷಣ ನಿಲ್ಲಿಸಲಾಗುವುದು.

† ಶ್ರೀ ವಾಟಾಳ್ ನಾಗರಾಜ್:– ಸನ್ಮಾನ್ಯ ಅಧ್ಯಕ್ಷರೇ, ಇದು ಒಂದು ಸಾಮಾನ್ಯ ಹೇಳಿಕೆಯಾಗಿದೆ. ನನಗೆ ಇದರ ಬಗ್ಗೆ ನಂಬಿಕೆ ಹೋಗಿದೆ. ಏಕೆಂದರೆ, ಅವರು ಹೇಳಿದ ಪ್ರಕಾರ, ನಗರ ಮಹಾಪಾಲಿಕೆಗೆ ಹಾಗೂ ಜಲಮಂಡಳಿಗೆ ಒಂದಕ್ಕೊಂದು ಹೊಂದಾಣಿಕೆ ಇರಲಿಲ್ಲ ಮತ್ತು ಈಗ ತಾನೇ ನಾವು ಔಷಧಿ ಕೊಟ್ಟಿದ್ದೇವೆ, ಚುಚ್ಚುಮದ್ದು ಹಾಕಿಸುತ್ತಿದ್ದೇವೆ ಎಂದು ಹೇಳಿದ್ದಾರೆ. 42 ಜನ ಸತ್ತ ಮೇಲೆ ಅವರ ಶವಸಂಸ್ಕಾರ ಮಾಡಲು ನಮ್ಮ ಸರ್ಕಾರ ನಿನ್ನೆ ಹೊಗಿದೆ. ಇದು ನಂಬಿಕೆ ಬರತಕ್ಕಂಥದ್ದಲ್ಲ, ಇದು ಬರೀ ಔಪಚಾರ್ಯ. ಕೇವಲ ಮೈಸೂರು ಜಿಲ್ಲೆಯಲ್ಲೇ ಅಲ್ಲ, ಇಡೀ ರಾಜ್ಯಾದ್ಯಂತ ಪ್ರತಿವರ್ಷ ಈ ತರಹ ಸಾಂಕ್ರಾಮಿಕ ರೋಗ ಬರುತ್ತದೆ. ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳವರೆಗೂ ಸರ್ಕಾರ ಎಚ್ಚರ ಇರಬೇಕಾಗಿತ್ತು. ಆದರೆ ಸರ್ಕಾರ ಆಗ ಎಚ್ಚರವಹಿಸಲಿಲ್ಲ. ಇದು ನಿಜವಾಗಿಯೂ ಸರ್ಕಾರದ ಬೇಜವಾಬ್ದಾರಿತನ. ನಾನು ಹೇಳುತ್ತಿರುವುದು ಇದು ಅತ್ಯಂತ ನೋವಿನ ಪ್ರಸಂಗ. ಮಾನ್ಯಮಂತ್ರಿಗಳು ನೀಡಿರುವ ಹೇಳಿಕೆಯಲ್ಲಿರುವ ಹಾಗೆ ಸರ್ಕಾರದ ಬೇಜವಾಬ್ದಾರಿತನದಿಂದ 43 ಜನ ಸತ್ತಿದ್ದಾರೆ. ನನಗೆ ತಿಳಿದ ಪ್ರಕಾರ 150 ಜನ ಸತ್ತಿದ್ದಾರೆ. ಇದನ್ನು ಸರ್ಕಾರ ಮುಚ್ಚಿಡುತ್ತಿದೆ. ಆದ್ದರಿಂದ ಸರ್ಕಾರದ ನೀತಿಯನ್ನು ನಾನು ವಿರೋಧಿಸುತ್ತೇನೆ ಮತ್ತು ಈ ಹೇಳಿಕೆಗೆ ನಾನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇನೆ. ಸರ್ಕಾರದ ನಿರ್ಧಾರ ಸರಿಯಲ್ಲ, ಸರ್ಕಾರದ ನಿರ್ಧಾರ ಖಂಡಿತವಾಗಿ ಬಹಳ ಮೋಸ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಜನರು ಅಲ್ಲಿ ಸಾಯುತ್ತಿದ್ದಾರೆ. ನಿನ್ನೆ ನಾನು ಆಸ್ಪತ್ರೆಗೆ ಹೋಗಿದ್ದೆ, ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ, ನೋಡಿಕೊಳ್ಳುವವರು ಇಲ್ಲ, ಔಷಧಿ ಇಲ್ಲ, ಅಲ್ಲಿ ಕೊಡತಕ್ಕಂಥ ಔಷಧಿ ಕೂಡ ಪರಿಣಾಮಕಾರಿಯಾಗಿಲ್ಲ, ಅಲ್ಲಿ ಸರ್ಕಾರ ಏನು ವ್ಯವಸ್ಥೆ ಮಾಡುತ್ತಿದೆ ? ಇದು ನಿಜವಾಗಿಯೂ ಒಳ್ಳೆಯದಲ್ಲ. ಈ ಹೇಳಿಕೆ ಬಗ್ಗೆ ತೀವ್ರವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಸರ್ಕಾರ ನಡೆಸುತ್ತಿರುವುದು ಸರಿಯಲ್ಲ.

(ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿಕೆಯ ಪ್ರತಿಯನ್ನು ಹರಿದು ಹಾಕಿ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಹದೇವ್:– ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ಮೈಸೂರು ಜಿಲ್ಲೆಯಲ್ಲಿ ಮಾತ್ರ ಸತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ನಂಜನಗೂಡು ತಾಲ್ಲೂಕಿನಲ್ಲಿ 2–3 ಸಾವು ಆಗಿದೆ. ಅದನ್ನು ಏಕೆ ಅವರು ಪ್ರಸ್ತಾಪ ಮಾಡಲಿಲ್ಲ ? ಮೈಸೂರು ಸಿಟಿ ಒಳಗೆ ಎಂದು ಹೇಳಿದ್ದಾರೆ, ಆದರೆ ನಂಜನಗೂಡು ಸಮೀಪ ಇದೆ. ಅಲ್ಲಿ 2–3 ಸಾವು ಆಗಿದೆ. ಅಲ್ಲೆಲ್ಲಾ ಮುನ್ನೆಚ್ಚರಿಕೆ ತೆಗೆದುಕೊಳ್ಳಲಿಲ್ಲ. ಅಧಿಕಾರಿಗಳು ಬೇಜವಾಬ್ದಾರಿತನದಿಂದ ವರ್ತಿಸಿದ್ದಾರೆ. ಜನರ ಜೀವನದ ಜೊತೆಯಲ್ಲಿ ಅಧಿಕಾರಿಗಳು ಚೆಲ್ಲಾಟ ಆಡುತ್ತಿದ್ದಾರೇನು ? ಒಬ್ಬರಿಗೊಬ್ಬರಿಗೆ ಕೋ ಆರ್ಡಿನೇಷನ್ ಇಲ್ಲ, ಅಂಥ ಅಧಿಕಾರಿಗಳನ್ನು ಮುಖ್ಯಮಂತ್ರಿಗಳು ಸಸ್ಪೆಂಡ್ ಮಾಡಿದ್ದಾರೆ, ಇನ್ನೂ ಮೇಲಾಧಿಕಾರಿಗಳು ಕೆಲವರು ಇದ್ದಾರೆ, ಅವರನ್ನು ಸಸ್ಪೆಂಡ್ ಮಾಡಬೇಕು. ಈ ಬಗ್ಗೆ ನಾನು ಜಲದರ್ಶಿನಿಗೆ ಹೋದಾಗ ಅಲ್ಲಿ ಅಧಿಕಾರಿಗಳೆಲ್ಲರೂ ಸಂತೋಷ ಕೂಟದಲ್ಲಿದ್ದಾರೆ. ನನ್ನ ಜೊತೆಯಲ್ಲಿ ಮಾತನಾಡಲಿಕ್ಕೆ ಅವರು ತಯಾರಿಲ್ಲ. ಇಂತಹ

ಅಧಿಕಾರಿಗಳನ್ನು ನಾವು ನಮ್ಮ ರಾಜ್ಯ ಸರ್ಕಾರದಲ್ಲಿಟ್ಟುಕೊಂಡಿದ್ದೇವೆ. ಇವೊತ್ತು ಜನ ತತ್ತರಿಸುತ್ತಿದ್ದಾರೆ. ಜೀವ ಭೀತಿ ಇದೆ, ಪ್ರಾಣಾಪಾಯದಲ್ಲಿದ್ದಾರೆ, ಬಹಳ ಕಷ್ಟದಲ್ಲಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಶಾಸಕರು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಲಿಕ್ಕೆ ಜಲದರ್ಶಿನಿಗೆ ಹೋದರೆ ಅವರು ಭೇಟಿಯಾಗಲಿಕ್ಕೆ ತಯಾರಿಲ್ಲ.

ಶ್ರೀ ಜಿ. ರಾಜೂಗೌಡ:– ಮಾನ್ಯ ಅಧ್ಯಕ್ಷರೇ, ಈ ಪರಿಸ್ಥಿತಿ ಏನು ಇದೆ, ಇದನ್ನ ತಡೆಗಟ್ಟಬಹುದಾಗಿತ್ತು. ಹೇಗೆಂದರೆ, 15 ದಿವಸಕ್ಕೆ ಮೊದಲೇ , ಏನು ನೀರನ್ನು ಸ್ವಚ್ಛ ಮಾಡತಕ್ಕಂಥ ಕಾರ್ಯಾಗಾರ ಇದೆಯೋ, ಆ ಕಾರ್ಯಾಗಾರದಿಂದ ಸ್ಯಾಂಪಲ್ ನೀರನ್ನು ತೆಗೆದು ಪರೀಕ್ಷೆ ಮಾಡಿದಾಗ ನೂರು ಮಿಲಿ ಮೀಟರ್ ನೀರಿನಲ್ಲಿ ಸುಮಾರು 60–70 ಬ್ಯಾಕ್ಟೀರಿಯಾ ಇರತಕ್ಕಂತದ್ದನ್ನು ಕಂಡಿದ್ದಾರೆ; ಗೊತ್ತಾಗಿದೆ; ಪರೀಕ್ಷೆ ಮಾಡಿದ್ದಾರೆ. ಆದರೆ ಅವರು ಪರಿಸ್ಥಿತಿಯನ್ನು ಮುಚ್ಚಿಟ್ಟಿದ್ದಾರೆ; ಬೇರೆಯವರಿಗೆ ಹೇಳಿಲ್ಲ. ಅದನ್ನು ಅಧಿಕಾರಿಗಳು ಹೇಳಿದ್ದರೆ ಈಗ ಏನು ಸಾವು ನಡೆಯುತ್ತಿದೆಯೋ ಈ ಸಾವನ್ನು ಪೂರ್ಣವಾಗಿ ತಡೆಗಟ್ಟಬಹುದಾಗಿತ್ತು. ನಾನು ಬೆಳಿಗ್ಗೆ ಕೇಳಿದೆ, ಅಧಿಕಾರಿಗಳನ್ನು ಅವರು ಅಮಾನತ್ತಿನಲ್ಲಿಟ್ಟಿದ್ದಾರೆ. ಆದರೆ ಅಂಥ ಅಧಿಕಾರಿಗಳು ಇನ್ನೂ ಉಳಿದುಕೊಂಡಿದ್ದಾರೆ. ದಯವಿಟ್ಟು ಅವರನ್ನು ಅಮಾನತ್ತಿನಲ್ಲಿಟ್ಟು ತಾವು ವಿಚಾರಣೆ ಮಾಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಹದೇವ್:– ಇವತ್ತು ಮೆಡಿಷಿನ್‌ನ ಅವಶ್ಯಕತೆ, ಮತ್ತು ಪ್ರಾಣಭೀತಿ ಇದೆ. ಜನರು ಯಾರು ಸಫರ್ ಮಾಡುತ್ತಿದ್ದಾರೋ ಅವರು ಉಳ್ಳವರಲ್ಲ ಅಥವಾ ಮಧ್ಯಮ ಜನರಲ್ಲ; ಬಡಜನರು; ಮುಗ್ಧ ಜನರು ಇವತ್ತು ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಚುಚ್ಚುಮದ್ದುಗಳಿಲ್ಲ; ಸರಿಯಾದಂಥ ವ್ಯವಸ್ಥೆ ಇಲ್ಲ. ಆ ಅಧಿಕಾರಿಗಳು ಅಲ್ಲಿಗೆ ಹೋಗಿ ಭೇಟಿ ಕೊಡುವುದಕ್ಕೆ ತಯಾರಿಲ್ಲ. ನಾನು ಖುದ್ದಾಗಿ ಆಸ್ಪತ್ರೆಗೆ ಹೋಗಿ ನೋಡಿದ್ದೇನೆ. ಸರ್ಕಾರದ ಮೇಲೆ ಇದು ಪರಿಣಾಮ ಬೀರುತ್ತದೆ. ಆದರೆ ಅಧಿಕಾರಿಗಳ ಮೇಲೆ ಪರಿಣಾಮ ಬೀರುವುದಿಲ್ಲ. ಇವತ್ತು ಆಡಳಿತದ ಮೇಲೆ ಪರಿಣಾಮ ಬೀರುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಪಕ್ಷ ಆಡಳಿತದಲ್ಲಿ ಇದ್ದುಕೊಂಡು ಸರ್ಕಾರ ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಂಡು ರಿಲೀಫ್ ಕೊಡಲಿಲ್ಲ ಎಂದರೆ ನಮ್ಮ ಆಡಳಿತದ ಸ್ಥಿತಿ ಯಾವ ರೀತಿಯಲ್ಲಿ ಇರಬೇಕು ? ಅಂಥ ಅಧಿಕಾರಿಗಳು ಏತಕ್ಕೆ ಇರಬೇಕು ? ಅವರು ಯಾರೇ ಆಗಿರಲಿ. ಅವರನ್ನು ಸಸ್ಪೆಂಡ್ ಮಾಡಬೇಕು. ಅವರು ಸೆಕ್ರೆಟರಿ ಆಗಿರಲಿ, ಕಮೀಷನರ್ ಆಗಿರಲಿ ಅಥವಾ ಯಾವುದೇ ಮಟ್ಟದ ಅಧಿಕಾರಿಯಾಗಿರಲಿ. ಬೇಜವಾಬ್ದಾರಿಯಿಂದ ವರ್ತಿಸತಕ್ಕಂಥ, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದಂಥ ಅಧಿಕಾರಿಗಳನ್ನು ಏತಕ್ಕೆ ನಾವು ಸರ್ಕಾರದಲ್ಲಿ ಇಟ್ಟುಕೊಂಡಿರಬೇಕು. ತಕ್ಷಣದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಈಗ ನಾನು ತಮ್ಮ ಮುಖೇನ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಎಲ್ಲೆಲ್ಲಿ ಮೆಡಿಷೆನ್ಸ್ ಅಗತ್ಯ ಇದೆ, ಎಲ್ಲೆಲ್ಲಿ ಯಾವ ಕೊರತೆ ಇದೆ ಎಂಬುದನ್ನು ನೋಡಬೇಕು. ನಮ್ಮ ನಂಜನಗೂಡಿನಲ್ಲಿದೆ, ಮೈಸೂರಿನಲ್ಲಿ ಈ ಪರಿಸ್ಥಿತಿ ಇದೆ. ಮೈಸೂರಿನ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ನಂಜನಗೂಡಿನಲ್ಲಂತೂ ಮೆಡಿಷಿನ್‌ನ ಅಭಾವ ಇದೆ, ಮತ್ತು ಹಾಸಿಗೆಗಳ ಅಭಾವ ಇದೆ. ಆಲ್ಲಿ ವೈದ್ಯರುಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಹೆಚ್ಚುವರಿ ಜನರು ಬೇಕಾಗಿದೆ. ಇವತ್ತು ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಸ್ಲಂ ಏರಿಯಾಗಳು ಇವೆ. ಆ ಸ್ಲಂ ಏರಿಯಾದಲ್ಲಿ ಎಫೆಕ್ಟ್ ಆಗುತ್ತಿದೆ. ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಈ ಅಧಿಕಾರಿಗಳು ಯಾರು ಇದುವರೆಗೆ ಬೇಜವಾಬ್ದಾರಿಯಿಂದ ವರ್ತಿಸಿದ್ದಾರೊ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮುಖೇನ ಒತ್ತಾಯ ಮಾಡುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿಕೆ ಕೊಟ್ಟಿದ್ದಾರೆ ಇದು ಭಾಗಶಃ ಸತ್ಯವಾದುದು.

ಪೂರ್ತಿಯಾಗಿ ಸತ್ಯ ಅಲ್ಲ. ಆದರೆ ಸರ್ಕಾರದ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿನ ಸ್ವತಃ ಮೈಸೂರಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸ್ವಲ್ಪ ಕ್ರಮಗಳನ್ನು ತೆಗೆದುಕೊಂಡು ಬಂದಿದ್ದಾರೆ. ಆದರೆ ನಾನಾದರೂ ಈ ಸಮಯದಲ್ಲಿ ಎರಡು ವಿಷಯದಲ್ಲಿ ಒತ್ತಾಯ ಮಾಡುತ್ತೇನೆ. ತಮಗೆ ಗೊತ್ತಿರುವ ಹಾಗೆ, ಇವತ್ತು ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಸಂಗ್ರಹಿಸಿರತಕ್ಕ ವರದಿ ಪ್ರಕಾರವಾಗಿ ಇದು ಕೇವಲ ಮೈಸೂರು ನಗರಕ್ಕೆ ಅಥವಾ ಮೈಸೂರು ಜಿಲ್ಲೆಗೆ ಸೀಮಿತವಾಗಿರತಕ್ಕ ಒಂದು ಸಮಸ್ಯೆಯಾಗದೆ ರಾಜ್ಯದ ಇತರೆ ಭಾಗಗಳಿಗೂ ಸಹ ಬೇಸಿಗೆ ಬಂದಿರುವುದರಿಂದಾಗಿ ಇದು ಹರಡತಕ್ಕ ಸೂಚನೆಗಳು ಇವೆ. ದಾವಣಗೆರೆಯಲ್ಲಿ ಈಗಾಗಲೇ ನಾಲ್ಕು ಜನ ಸತ್ತಿದ್ದಾರೆ, ಕನಕಪುರ – ಸಾತನೂರು ಕ್ಷೇತ್ರಕ್ಕೆ ಸಂಬಂಧಿಸಿದಂತೆ 2–3 ಜನರು ಸತ್ತಿದ್ದಾರೆ. ಆದರೆ ವರದಿಯಲ್ಲಿ ಈ ವಿಚಾರ ಬಂದಿಲ್ಲ. ಅದಕ್ಕೋಸ್ಕರವಾಗಿ ನಾನು ಇದು ಪೂರ್ಣವಾಗಿ ಸತ್ಯ ಅಲ್ಲ ಎಂದು ಹೇಳಿದ್ದು. ನಾನು ಒತ್ತಾಯ ಮಾಡುವುದು ಎರಡು ವಿಚಾರಗಳ ಬಗ್ಗೆ. ಒಂದು, ತಾವು ಏನು ಕೊನೆಯಲ್ಲಿ ಹೇಳಿದ್ದೀರಿ. ಕ್ರಮ ತೆಗೆದುಕೊಳ್ಳದೆ ನೀರು ಕೊಡದೆ ಇದ್ದರೆ ನಗರಸಭೆಗಳಿಗೆ, ಪುರಸಭೆಗಳಿಗೆ ಮತ್ತು ಮಹಾನಗರಪಾಲಿಕೆಗಳಿಗೆ ಕೊಡತಕ್ಕಂಥಾ ಅನುದಾನವನ್ನು ನಾವು ನಿಲ್ಲಿಸುತ್ತೇವೆ. ಎಂದು ಹೇಳಿದ್ದೀರಿ. ಅವರ ಪರಿಸ್ಥಿತಿ ನಿಮಗೆ ಗೊತ್ತಿದೆ, ಅವರ ಹತ್ತಿರ ಸಂಬಳ ಕೊಡುವುದಕ್ಕೇ ದುಡ್ಡು ಇಲ್ಲ. ಇನ್ನು ಬ್ಲೀಚಿಂಗ್ ಪೌಡರ್ ಹಾಕುವುದಕ್ಕೆ ಅವರು ಎಲ್ಲಿಂದ ದುಡ್ಡು ತರುತ್ತಾರೆ. ಆದ್ದರಿಂದ ನಾನು ತಮ್ಮಲ್ಲಿ ಒತ್ತಾಯ ಮಾಡುವುದು ಏನೆಂದರೆ ಇನ್ನು ಮೂರು ತಿಂಗಳ ಕಾಲ ವಿಶೇಷವಾಗಿ ಈಗ ಕಾಲರಾ ಬಂತು, 40 ಜನ ಸತ್ತರು, 400 ಜನ ಸತ್ತರು, ಕರುಳು ಬೇನೆ ಬಂತು ಅದರಿಂದ ನಾನೂರು ಜನ ಸತ್ತರು, ತಾವು ಪರಿಹಾರ ಕೊಟ್ಟು ಎಲ್ಲಾ ಡಾಕ್ಟರ್‌ಗಳನ್ನು ಅಲ್ಲಿಗೆ ಕಳಿಸುವುದರ ಬದಲಾಗಿ prevention is better than cure is it? What I suggest is ತಾವು ದಯವಿಟ್ಟು ಎಲ್ಲಾ ಮುನಿಸಿಪಾಲಿಟಿಗಳಿಗೆ ನಗರಪಾಲಿಕೆಗಳಿಗೆ, ಮಹಾನಗರಪಾಲಿಕೆಗಳಿಗೆ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಕ್ಲೋರಿನೇಷನ್ ಹಾಗೂ ಇನ್ನೂ ಏನೇನು ಅವಶ್ಯಕವಾಗಿ ಬೇಕಾಗಿರತಕ್ಕದ್ದು ಇದೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು. ಇದು ಒಂದು. ಎರಡನೆಯದು ನನಗೆ ಗೊತ್ತಿದೆ, ಡಾ: ಮಲಕರೆಡ್ಡಿ ಅವರು ಇದನ್ನೇ ಮಾತನಾಡಬೇಕೆಂದು ಇದ್ದಾರೆ ಎಂದು ಅಂದುಕೊಂಡಿದ್ದೇನೆ. ಮುಖ್ಯವಾಗಿ ಪೇಷೆಂಟ್ಸ್‌ಗೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕ ಎಮರ್ಜೆನ್ಸಿ ಡ್ರಗ್ಸ್ ಈಗ ನಮ್ಮ ಆಸ್ಪತ್ರೆಗಳಲ್ಲಿ ಇಲ್ಲ. ಅಧಿಕಾರಿಗಳು ನಾವು ಹೋಗಿ ಕೇಳಿದಾಗ ಹೇಳುವುದಕ್ಕೆ ಹೆದರುತ್ತಾರೆ. ದುಡ್ಡು ಇಲ್ಲ ಎನ್ನುತ್ತಾರೆ. ಇರುವ ಪ್ರಶ್ನೆ ಅದೆ. ಆದ್ದರಿಂದ ನಾನು ಮಾನ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದು ಏನೆಂದರೆ 2 – 3 ತಿಂಗಳ ಕಾಲ ಮಳೆಗಾಲ ಪ್ರಾರಂಭ ಆಗುವವರೆಗೆ ಸಹ ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಕರುಳು ಬೇನೆ, ಕಾಲರಾ ಮತ್ತು ಸಾಂಕ್ರಾಮಿಕ ರೋಗಗಳು ಏನು ಇವೆ. ಈ ವಿಚಾರದ ಕಡೆಗೆ ಗಮನ ಕೊಡಿ. ಒಂದನೆಯದು ನಗರಸಭೆ, ಪುರಸಭೆಗೆ ಕುಡಿಯುವ ನೀರನ್ನು ಶುದ್ಧೀಕರಣ ಮಾಡುವುದಕ್ಕೆ ಬೇಕಾಗಿರತಕ್ಕ ಹಣ ಕೊಡುವುದು. ಎರಡನೆಯದು, ಇದಕ್ಕೆ ಬೇಕಾಗಿರತಕ್ಕ ಎಸೆನ್ಷಿಯಲ್ ಡ್ರಗ್ಸ್ ಏನು ಇದೆ, ಈ ಖಾಯಿಲೆಗಳಿಗೆ ಸಂಬಂಧಪಟ್ಟ ಹಾಗೆ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಬಿಡುಗಡೆ ಮಾಡುವುದಕ್ಕೆ ಕೊನೆಯ ಪಕ್ಷ ಒಂದು ಕೋಟಿ ರೂಪಾಯಿ ಆದರೂ ಬಿಡುಗಡೆ ಮಾಡಬೇಕು ಎಂದು ನನಗನ್ನಿಸುತ್ತದೆ. ನಾನು ಏನು ನಿರೀಕ್ಷೆ ಮಾಡಿದ್ದೆ ಅಂದರೆ, ಮಾನ್ಯ ಮಂತ್ರಿಗಳು ಕೊಟ್ಟ ಒಂದು ಹೇಳಿಕೆಯಲ್ಲಿ ಅಧಿಕಾರಿಗಳನ್ನು ಹೊನ್ನೇಗೌಡರನ್ನು ಮತ್ತು ಅಲ್ಲಿರತಕ್ಕ ತಿಮ್ಮಯ್ಯನವರನ್ನು, ಇವರುಗಳು ಮಾಡಿರತಕ್ಕದ್ದರ ಬಗ್ಗೆ ಹೇಳಬಹುದು ಎಂದು. ಮಾನ್ಯ ಮಹದೇವ್ ಅವರು ಹೇಳಿದ ಹಾಗೆ ಇನ್ನೂ ನಾಲ್ಕು ಜನರನ್ನು ಅಮಾನತ್ತಿನಲ್ಲಿಡತಕ್ಕ ವಿಚಾರ ಇದು ಒಂದು ಕ್ರಮ. ಇದು ಆಗಬೇಕಾಗುತ್ತದೆ; ಈಗ ಮಾಡಿರುವುದು ಸರಿ. ಅದರ ಜೊತೆಗೆ ಬಹಳ

ಮುಖ್ಯವಾಗಿ ಇದು ಬಂಡವಾಳ ಇಲ್ಲದೇ ಇರತಕ್ಕ ಬಡಾಯಿ ಆಗುತ್ತದೆ. ದುಡ್ಡೇ ಕೊಡದೆ ಹೋದರೆ ಅಧಿಕಾರಿಗಳು ಏನು ಮಾಡುತ್ತಾರೆ. ದಯಮಾಡಿ ಇದಕ್ಕೆ ಬೇಕಾಗಿರತಕ್ಕ ಹಣವನ್ನು ಬಿಡುಗಡೆ ಮಾಡಬೇಕು ಎಂದು ತಮ್ಮ ಮೂಲಕ ಅವರಲ್ಲಿ ಒತ್ತಾಯ ಮಾಡುತ್ತೇನೆ.

ಡಾ: ಎ.ಬಿ. ಮಲಕರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇಷ್ಟು ವಾರಗಳ ಮಟ್ಟಿಗೆ ಈ ರೋಗ ಉಲ್ಬಣ ಪರಿಸ್ಥಿತಿಯಲ್ಲಿ ಏಕೆ ಬಂತು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಇದು ವಾಟರ್ ಬಾರ್ನ್ ಡಿಸೀಸ್. ಇದು ನೀರಿನ ಮೂಲಕ ಹರಡತಕ್ಕ ರೋಗ. ಈ ರೋಗ ಇಡೀ ಮೈಸೂರು ನಗರಕ್ಕೆ ಹಬ್ಬಿದೆಯೋ ಅಥವಾ ಕೆಲವು ಲೊಕ್ಯಾಲಿಟೀಸ್‌ಗೆ ಹಬ್ಬಿದೆಯೋ ನೋಡಬೇಕು. ಸಾಮಾನ್ಯವಾಗಿ ಏನು ಆಗುತ್ತದೆ ಅಂದರೆ, ಈ ರೋಗ ಕೆಳಮಟ್ಟದ ಜನರು ಇರುವ ಕಡೆ ಬಡವರು ಇರತಕ್ಕ ಲೊಕ್ಯಾಲಿಟಿಯಲ್ಲಿ ಈ ರೋಗ ಜಾಸ್ತಿ ಆಗಿದೆ; ಕಾರಣ ಇಷ್ಟೆ, ಯಾರು ಊಟವನ್ನು ಟೈಮಿಗೆ ಸರಿಯಾಗಿ ಮಾಡುವುದಿಲ್ಲ ಅವರಿಗೆ ಈ ರೋಗ ಬರುತ್ತದೆ. ಯಾರು ಟೈಮಿಗೆ ಸರಿಯಾಗಿ ಊಟ ಮಾಡುತ್ತಾರೆ ಅವರಿಗೆ ಈ ರೋಗ ಬರುವುದಿಲ್ಲ. ಆರ್ಗನೈಸೆಷನ್ ಸಹನೆ ಮಾಡಿದರೂ ಉಪಯೋಗ ಆಗುವುದಿಲ್ಲ. ಯಾರು ಉಪವಾಸ ಇರುತ್ತಾರೆ ಅಂತಹ ಜನರಿಗೆ ಮಾತ್ರ ಈ ರೋಗ ಹಬ್ಬುತ್ತದೆ. ಏಕೆಂದರೆ, ಅಸಿಡಿಟಿ ಇರುತ್ತದೆ, ಈ ಅಸಿಡ್‌ನಲ್ಲಿ ಈ ಕ್ರಿಮಿಗಳು ಸತ್ತು ಹೋಗಿಬಿಡುತ್ತವೆ. ನಾನು ಹೇಳುವುದು ಏನೆಂದರೆ, ಊಟ ಮಾಡಿದ ಮೇಲೆ ಅಸಿಡಿಟಿ ಹೆಚ್ಚು ಆಗುತ್ತದೆ, ಅಸಿಡಿಟಿ ಇನ್‌ಕ್ರೀಸ್ ಆಗುತ್ತದೆ ಆಂತ ಆ ಅಸಿಡಿಟಿಯಲ್ಲಿ ಬೆಂದು ಈ ಕ್ರಿಮಿಗಳು ಸತ್ತು ಹೋಗುತ್ತವೆ.

ಆದ್ದರಿಂದ ಕೊಳಚೆ ಪ್ರದೇಶದಲ್ಲಿಯಷ್ಟೇ ಈ ರೋಗ ಹರಡುತ್ತದೆ. ಇದು ಒಂದು. ಎರಡನೆಯದಾಗಿ ಇದು ಬೇಸಿಗೆಯಲ್ಲಿ ಹಬ್ಬತಕ್ಕ ರೋಗವಲ್ಲ, ಮಳೆಗಾಲದಲ್ಲಿ ಹಬ್ಬ ತಕ್ಕ ರೋಗ. ಏಕೆಂದರೆ ವಾಟರ್ ಸಪ್ಲೈ ಸಿಸ್ಟಂ ರಿಸರ್ವಾಯರ್‌ನಲ್ಲಿ ಏನು ಇರುತ್ತದೆ. ಅದಕ್ಕೆ ಅನೇಕ ಮೂಲಗಳಿಂದ ನೀರು ಬರುತ್ತದೆ. ಕೆರೆಗಳಿಂದ, ಓಣಿಗಳಿಂದ ಹೊಲಗಳಿಂದ ಫೀಲ್ಡಿನಿಂದ, ಸಣ್ಣ ಸಣ್ಣ ನಾಲೆಗಳಿಂದ ನೀರು ಹರಿದು ಬಂದು ರಿಸರ್ವಾಯರ್‌ನಲ್ಲಿ ಕಂಟಾಮಿನೇಷನ್ ಆದಾಗ ಈ ರೋಗ ಹಬ್ಬುತ್ತದೆ. ಇದು ಬೇಸಿಗೆ ರೋಗ ಅಲ್ಲ; ಇದನ್ನು ನಿಯಂತ್ರಿಣ ಮಾಡುವುದು ಸಹ ಅತ್ಯಂತ ಸರಳ ಇದೆ. ಅದಕ್ಕೆ ಮೊದಲು ರಿಪೋರ್ಟ್‌ನಲ್ಲಿ ಕಂಡು ಬರುವುದಿಲ್ಲ. ಯಾವ ಲೊಕ್ಯಾಲಿಟಿಯಲ್ಲಿ ಯಾವ ಓಣಿಯಲ್ಲಿ ಈ ರೋಗ ಹಬ್ಬಿದೆ ಅಲ್ಲಿ ಕೆಟ್ಟರತಕ್ಕ ನಳಗಳನ್ನು ತಕ್ಷಣ ಐಡೆಂಟಿಫೈ ಮಾಡಿ ಪೈಪ್‌ಗಳನ್ನು ದುರಸ್ತಿ ಮಾಡಿ ನೀರು ಸಪ್ಲೈ ಮಾಡಿದರೆ ತಕ್ಷಣ ಕಂಟ್ರೋಲ್‌ಗೆ ಬರುತ್ತದೆ ಅಥವಾ ಸೆಂಟ್ರಲ್ ಇನ್‌ಫೆಕ್ಷನ್ ಆಗಿದ್ದರೆ ಆಗ ಬ್ಲೀಚಿಂಗ್ ಪೌಡರೋ ಅಥವಾ ಪೊಟಾಷಿಯಂ ಪರಮಾಂಗನೇಟ್ ಹಾಕಿ ಸೆಂಟ್ರಲ್ ಶುದ್ಧೀಕರಣ ಆಗಬೇಕಾಗುತ್ತದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡುವುದು ಕೂಡ ಬೇಕಾಗುವುದಿಲ್ಲ. ಸ್ವಲ್ಪ ಸೈಂಟಿಫಿಕ್ ಅಪ್ರೋಚ್ ಆಗಬೇಕು, ಮಾನ್ಯ ಸದಸ್ಯರುಗಳು ಹೇಳಿದಂತೆ ಆಫೀಸ್‌ಗಳಲ್ಲಿ ಕೊ–ಆರ್ಡಿನೇಷನ್ ಇಲ್ಲ; ಈ ರೋಗಕ್ಕೆ ಡಾಕ್ಟರ್‌ಗಳಿಗಿಂತ ಹೆಚ್ಚಾಗಿ ಬೇಕಾಗಿರತಕ್ಕದ್ದು ನರ್ಸಸ್. ಇಲ್ಲಿ ರೋಗ ಪತ್ತೆ ಹಚ್ಚಿ ಕಂಟ್ರೋಲಿಗೆ ತರಬೇಕಾದರೆ ನರ್ಸ್‌ಗಳು ಹೆಚ್ಚು ಬೇಕು ಮತ್ತು ಉಳಿದ ಸಿಬ್ಬಂದಿಗಳು ಹೆಚ್ಚು ಬೇಕಾಗುತ್ತದೆ. ಒಬ್ಬ ಡಾಕ್ಟರಿಗೆ ಹತ್ತು ಮಂದಿ ನರ್ಸಸ್ ಅಥವಾ 20 ಮಂದಿ ಅವರ ಕೈಕೆಳಗೆ ಕೆಲಸ ಮಾಡತಕ್ಕ ಸಿಬ್ಬಂದಿ ಜನರು ಹೆಚ್ಚು ಬೇಕಾಗುತ್ತದೆ. ಇದರ ಜೊತೆಗೆ ಇಂಟರಿಮ್ ಫ್ರೂಟ್ಸ್ ಹೆಚ್ಚು ಬೇಕಾಗುತ್ತದೆ. ಅದು ಔಷಧಿಯೊಳಗೆ ನಿಯಂತ್ರಣಕ್ಕೆ ಬರತಕ್ಕ ರೋಗವಲ್ಲ. ಸರ್ಕಾರ ಹೆಚ್ಚು ಖರ್ಚು ಮಾಡಬೇಕಾದ್ದು ಅವಶ್ಯ ಬೀಳುವುದಿಲ್ಲ. ಏಕೆಂದರೆ ಯಾರಿಗೆ ಅವಶ್ಯಕತೆ ಇದೆ ಅವರಿಗೆ ಕಾರ್ಟಿಸನ್ ಇಂಜೆಕ್ಷನ್ ಕೊಡಬೇಕಾದರೆ ಸ್ವಲ್ಪ ಹಣ ಬೇಕಾಗುತ್ತದೆ. ಹೆಚ್ಚಾಗಿ ಫ್ರೂಟ್ಸ್ ಬೇಕಾಗುತ್ತದೆ. ನರ್ಸಸ್ ಹೆಚ್ಚು ಬೇಕಾಗುತ್ತದೆ, ಸಿಬ್ಬಂದಿಗಳು ಹೆಚ್ಚು ಬೇಕಾಗುತ್ತದೆ. ಮತ್ತು ರೋಗ ಯಾವಾಗ ಆಗುತ್ತದೆ ಎಂದರೆ ವಾಟರ್ ಕಂಟಾಮಿನೇಷನ್ ಆದಾಗ ಆ ಲೊಕಾಲಿಟಿಯ ಪೈಪ್ ಕಂಟ್ಯಾಮಿನೇಷನ್ ಆದಾಗ ಅಥವಾ ಸೆಂಟ್ರಲ್ ಕಂಟಾಮಿನೇಷನ್ ಆದಾಗ. ಸೆಂಟ್ರಲ್ ಆಗಿದ್ದರೆ ಇಡೀ

ಸಿಟಿಗೆ ವ್ಯಾಪ್ತಿ ಆಗುತ್ತಿತ್ತು. ಆದ್ದರಿಂದ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಇಷ್ಟು ತಡ ಬೇಕಾಗುವುದಿಲ್ಲ. ಈಗಾಗಲೇ ಮಹಾನಿರ್ದೇಶಕರನ್ನು ಕಳುಹಿಸಿದ್ದೀರಿ. ಹಣ ತಕ್ಷಣ ಬಿಡುಗಡೆ ಮಾಡಿ ಸ್ಥಳದಲ್ಲಿ ಅಧ್ಯಯನ ಮಾಡಿ, ಸಮೀಕ್ಷೆ ಮಾಡಿ ಪರಿಹಾರವನ್ನು ಒದಗಿಸಿಕೊಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕಮಾದು:- ಮಾನ್ಯ ಸಭಾಧ್ಯಕ್ಷರೆ, ಈಗ ಈ ರೋಗದ ವಿಚಾರವಾಗಿ ನನ್ನ ಹಲವಾರು ಸದಸ್ಯ ಮಿತ್ರರು ಮಾತನಾಡಿದ್ದಾರೆ. ನನ್ನ ಹುಣಸೂರು ಕ್ಷೇತ್ರದಲ್ಲಿ ಕೂಡ ಸುಮಾರು 20ಜನ ಸರಿಯಾದ ಔಷಧಿಗಳನ್ನು ಪಡೆಯಲಿಕ್ಕೆ ಸಾಧ್ಯವಾಗದೆ ಮೈಸೂರು ನಗರದ ಆಸ್ಪತ್ರೆಗೆ ಬಂದು ಸೇರಿದ್ದಾರೆ. ನಾನು ಈ ಒಂದು ವಿಚಾರ ಗೊತ್ತಾದ ತಕ್ಷಣ ಎರಡು ಮೂರು ಆಸ್ಪತ್ರೆಗಳಿಗೆ ಖುದ್ದಾಗಿ ಭೇಟಿ ಕೊಟ್ಟಾಗ ಅಲ್ಲಿ ವೈದ್ಯಾಧಿಕಾರಿಗಳು ನಿಸ್ಸಹಾಯಕರಾಗಿ ನಮ್ಮಲ್ಲಿ ಅತ್ಯವಶ್ಯಕವಾಗಿರತಕ್ಕ, ತಕ್ಷಣದಲ್ಲಿ ಚಿಕಿತ್ಸೆ ಕೊಡತಕ್ಕಂಥ ಸಾಮಾನ್ಯವಾಗಿ ಗ್ಲೂಕೋಸ್ ಕೊಡುತ್ತೇವೆ ಅದೂ ಸಹ ನಮ್ಮಲ್ಲಿ ಇಲ್ಲ ಸಾರ್ ಇದರಿಂದ ನಮಗೆ ಬಹಳ ತೊಂದರೆಯಾಗಿದೆ ಎನ್ನತಕ್ಕ ಮಾತನ್ನು ಹೇಳಿದರು. ಒಬ್ಬ ವೈದ್ಯಾಧಿಕಾರಿ ನನಗೆ ಲಿಖಿತ ಮೂಲಕವಾಗಿ ಕೊಟ್ಟಿದ್ದಾರೆ. 1992-93ನೇ ಸಾಲಿನಲ್ಲಿ ಆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಏನು ಔಷಧಿಗಳನ್ನು ಕೊಡಬೇಕಾಗಿತ್ತು. ಈಗ ಮಾರ್ಚ್ ಅಂತ್ಯ ಬರುತ್ತಿದ್ದರೂ ಸಹ ಇದುವರೆಗೆ ಒಂದು ರೂಪಾಯಿಯದೂ ಕೂಡ ಆ ಆಸ್ಪತ್ರೆಗೆ ಬಿಡುಗಡೆಯಾಗಿಲ್ಲ ಎಂದು ಲಿಖಿತ ಮೂಲಕ ಮನವಿ ಕೊಟ್ಟಿದ್ದಾರೆ. ನಾನು ನಮ್ಮ ಮೆಡಿಕಲ್ ಸ್ಟೋರ್ ಡಿಪಾರ್ಟ್‌ಮೆಂಟಿಗೆ ಅದನ್ನು ಸಬ್ಮಿಟ್ ಮಾಡಿದ್ದೇನೆ. 1992-93ನೇ ಇಸವಿಯ ಕೊನೆಯ ತಿಂಗಳು ಬಂದರೂ ಕೂಡ ಇದುವರೆಗೆ ಕೊಡದೇ ಇದ್ದ ಮೇಲೆ ಒಂದು ವರ್ಷ ಆ ಆಸ್ಪತ್ರೆಯಲ್ಲಿ ಆ ವೈದ್ಯಾಧಿಕಾರಿ ಯಾವ ರೀತಿ ಕಾರ್ಯ ನಿರ್ವಹಿಸಬೇಕು ಎಂದು ಸರ್ಕಾರ ಯೋಚನೆ ಮಾಡಬೇಕಾಗುತ್ತದೆ.

ಮತ್ತು ಈಗ ಯಾರು ಮೃತಪಟ್ಟಿದ್ದಾರೆ, ಇದಕ್ಕೆಲ್ಲಾ ಸರ್ಕಾರವೇ ಹೊಣೆಯಾಗಿರುತ್ತದೆ. ಮತೀಯ ಗಲಭೆಗಳಲ್ಲಿ ಚಾಕು ಚೂರಿಗಳ ಇರಿತದಿಂದ ಅಥವಾ ಬೆಂಕಿ ಅನಾಹುತದಿಂದ ಸತ್ತಂತವರನ್ನು ಯಾವ ರೀತಿ ಪರಿಗಣನೆಗೆ ತೆಗೆದುಕೊಂಡು ಸರ್ಕಾರ ಅವರಿಗೆ ಪರಿಹಾರ ಕೊಡುತ್ತದೋ ಅದೇ ರೀತಿ ಕಾಲರಾದಿಂದ ಸತ್ತವರಿಗೂ ಕೂಡ ಸರ್ಕಾರ ಪರಿಹಾರ ಕೊಡಬೇಕಾಗುತ್ತದೆ. ಏನೆಂದರೆ, ಕಾಲರಾ ಕೂಡ ಅನಿರೀಕ್ಷಿತವಾಗಿ ಬಂದಂಥ ಕಾಯಿಲೆ. ಮತೀಯ ಗಲಭೆಗಳಲ್ಲಿ ಒಬ್ಬ ವ್ಯಕ್ತಿಗೆ ಚೂರಿಯಿಂದ ಇರಿದರೆ ಆತ ತಕ್ಷಣ ಯಾವ ರೀತಿ ಮೃತ ಪಡುತ್ತಾನೋ, ಕಾಲರಾ ಕಾಯಿಲೆ ಬಂದಾಗಲೂ ಕೂಡ ವ್ಯಕ್ತಿ ತಕ್ಷಣ ಸಾಯುತ್ತಾನೆ. ಸರಿಯಾದ ಸಮಯಕ್ಕೆ ಔಷಧೋಪಚಾರ ಮಾಡದಿರುವುದೇ ಸಾಯುವುದಕ್ಕೆ ಮೂಲ ಕಾರಣವಾಗುತ್ತದೆ. ಅದಕ್ಕೋಸ್ಕರ ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಯಾರು ನಮ್ಮ ಜಿಲ್ಲೆಯಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಕಾಲರಾ ರೋಗಕ್ಕೆ ತುತ್ತಾಗಿ ಸತ್ತಿದ್ದಾರೋ ಅವರಿಗೆ ಪರಿಹಾರ ಸರ್ಕಾರ ಕೊಡಬೇಕು. ಮತ್ತೊಂದು ಅತ್ಯಾವಶ್ಯಕವಾಗಿ ಹೇಳಬೇಕಾದ್ದು ಏನೆಂದರೆ ಕಾಲರಾ ಕಾಯಿಲೆ ಬರತಕ್ಕಂಥಾದ್ದು ಬಹಳ ಮುಖ್ಯವಾಗಿ ಕುಡಿಯುವ ನೀರಿನಿಂದ ಎಂದು ವೈದ್ಯಾಧಿಕಾರಿಗಳು, ವಿಜ್ಞಾನಿಗಳು ಹೇಳಿದ್ದಾರೆ. ಸಾಮಾನ್ಯ ಹೋಟೇಲುಗಳಲ್ಲಿ, ಪುರಸಭೆ, ನಗರಸಭೆ ಮತ್ತು ಕಾರ್ಪೋರೇಷನ್ ಎಲ್ಲಿ ತೆಗೆದುಕೊಂಡರೂ ಯಾವುದೇ ಹೋಟೇಲುಗಳಲ್ಲಿ ಕೂಡ ಸ್ವಚ್ಛವಾದ ನೀರನ್ನು ಕುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದಿಶೆಯಲ್ಲಿ ನಗರಸಭೆಯವರು ಹೋಟೇಲನ್ನು ಪ್ರಾರಂಭ ಮಾಡಲು ಅನುಮತಿ ಕೊಡುವಂಥ ಸಂದರ್ಭದಲ್ಲಿ ಲೈಸೆನ್ಸ್ ಕೊಡುವಾಗ ಫಿಲ್ಟರ್ ವಾಟರ್ ಅನ್ನು ಕಡ್ಡಾಯವಾಗಿ ಕೊಡಬೇಕೆಂಬ ನಿಯಮವನ್ನು ಅಳವಡಿಸಬೇಕು. ಮತ್ತು ಬೇಸಿಗೆ ಕಾಲದಲ್ಲಿ ಕಾಲರಾ ರೋಗ ಹರಡುವ ಸಂದರ್ಭದಲ್ಲಿ ಕುಡಿಯುವುದಕ್ಕೆ ಬಿಸಿ ನೀರು ಕೊಡಿ ಎಂದು ಎಲ್ಲಾ ಕಡೆ ಪ್ರಕಟಣೆ ಮಾಡುವದು ಆ ಕಾಲಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸದಾಕಾಲ ಯಾವುದೇ ಒಂದು ನಗರ ಪ್ರದೇಶದಲ್ಲಿ, ಮುನಿಸಿಪಾಲಿಟಿ ಪ್ರದೇಶಗಳಲ್ಲಿ ಹೋಟೇಲನ್ನು ತೆರೆಯತಕ್ಕಂಥ ಮಾಲೀಕನಿಗೆ ಕಡ್ಡಾಯವಾಗಿ

ಹೋಟೇಲಿಗೆ ಬರತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಕಡ್ಡಾಯವಾಗಿ ಫಿಲ್ಟರ್ ವಾಟರ್ ಕೊಡಬೇಕೆಂಬ ನಿಯಮವನ್ನು ಅಳವಡಿಸಿ ಲೈಸೆನ್ಸ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವರ್ತನೆ ಬೇಜವಾಬ್ದಾರಿತನದ್ದೆಂದು ಸರ್ಕಾರ ಈಗಾಗಲೇ ಮನಗಂಡಿದೆ. ಈಗಾಗಲೇ ಕ್ರಮ ತೆಗೆದುಕೊಂಡಿರುವುದರ ಜೊತೆಗೆ ಈ ಬೇಜವಾಬ್ದಾರಿತನಕ್ಕೆ ಇನ್ಯಾರಾದರೂ ಅಧಿಕಾರವರ್ಗದವರು ಕಾರಣರಾಗಿದ್ದರೆ, ಅವರ ಮೇಲೂ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಗೆ ಈಗಾಗಲೇ ಸೂಚನೆ ಕೊಡಲಾಗಿದೆ. ಮತ್ತು ಪ್ರಜಾಪ್ರತಿನಿಧಿಗಳನ್ನು ಕಂಡು ಉದಾಸೀನ ಭಾವದಿಂದ ಅವರ ಸಲಹೆಗಳನ್ನು ತಿರಸ್ಕಾರ ಮಾಡುವುದು ಕೂಡ ಆಕ್ಷಮ್ಯವಾದುದು. ಇದು ಸರ್ಕಾರದ ಡಿಕ್ಲೇರ್ಡ್ ಪಾಲಿಸಿಗೂ ವಿರುದ್ಧವಾಗಿದೆ.

ಶ್ರೀ ಎಂ. ಮಹದೇವ್:– ಯಾರೇ ಉನ್ನತಾಧಿಕಾರಿಗಳಾಗಿರಲಿ ಪ್ರಜಾಪ್ರತಿನಿಧಿಗಳ ಭಾವನೆಗಳನ್ನು ತಿರಸ್ಕರಿಸುವುದಾಗಲಿ, ಅಗೌರವದಿಂದ ಕಾಣುವುದಾಗಲಿ ಇದ್ದರೆ ಸರ್ಕಾರ ಅಂತಹವರ ಮೇಲೆ ತೀವ್ರತರವಾದ ಕ್ರಮ ಕೈಗೊಳ್ಳಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ತಾವು ಹೇಳಿದ್ದಕ್ಕೆ ನಾನು ಒಪ್ಪಿಗೆ ಕೊಟ್ಟಿದ್ದೇನೆ. ನಂತರ, ಮಾನ್ಯ ಸದಸ್ಯರಾದ ಶ್ರೀ ಸಿಂಧ್ಯರವರು, ಡಾ: ಮಲಕರೆಡ್ಡಿಯವರು ರಚನಾತ್ಮಕವಾದ ಸಲಹೆ ಕೊಟ್ಟಿದ್ದು, ಅದು ಬಹಳ ಯೋಗ್ಯವಾದುದಾಗಿದೆ. ಈಗಾಗಲೇ ಮುಖ್ಯಮಂತ್ರಿಗಳು he has given a blank cheque to the Department on this matter. ಎಷ್ಟು ಬೇಕಾದರೂ ಹಣವನ್ನು ಖರ್ಚು ಮಾಡಿ, ಈ ರೋಗ ಹರಡದಂತೆ ತಡೆಯುವುದಷ್ಟೇ ಅಲ್ಲ, ಮುಂದೆ ಬಾರದಂತೆ ತಡೆಗಟ್ಟುವುದಕ್ಕೆ ಇಡೀ ರಾಜ್ಯದಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಸರ್ಕಾರದಿಂದ ಆದೇಶವನ್ನು ಇಲಾಖೆಯವರಿಗೆ ಕೊಟ್ಟಿದ್ದಾರೆ. ಆದರಂತೆ ಯಾವ ಕಡೆಗಳಲ್ಲಿ ಔಷಧಿಗಾಗಲಿ ಅಥವಾ ತಕ್ಷಣದ ಸೇವೆಗಾಗಲಿ ಯಾವುದಕ್ಕೂ ತೊಂದರೆ ಬಾರದಂತೆ ಏರ್ಪಾಡು ಮಾಡುವುದಕ್ಕೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. The work is going on a war-like preparations. ಆದುದರಿಂದ, ಮಾನ್ಯ ಸದಸ್ಯರ ಕಳಕಳಿ ಏನಿದೆ, ಇದು ಸರ್ಕಾರಕ್ಕೆ ಪೂರ್ಣವಾಗಿ ಅರ್ಥವಾಗಿದೆ. ಇದಿಷ್ಟು ಮಾಡಿರುವ ಕ್ರಮವಲ್ಲದೆ ಮತ್ತೇನಾದರೂ ಕ್ರಮಗಳನ್ನು ತೆಗೆದುಕೊಳ್ಳಲು ತಾವು ಸಲಹೆ ಕೊಟ್ಟರೂ ಕೂಡ ಇಲಾಖೆಯವರು ಅದನ್ನು ಪರಿಗಣಿಸಿ ಮುಂದಿನ ಕೆಲಸ ಮಾಡುವುದಕ್ಕೆ ಸೂಚನೆ ಕೊಡಲಾಗಿದೆ. ಮಾನ್ಯ ಸದಸ್ಯರುಗಳು ಒಂದು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಬಿಡುಗಡೆ ಮಾಡಬೇಕೆಂದು ಕೇಳಿದ್ದಾರೆ, ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ಬಿಡುಗಡೆ ಮಾಡಲು ಸರ್ಕಾರ ತಯಾರಿದೆ. ಯಾವುದೇ ಕಾರಣದಿಂದ ಈ ರೋಗ ಉಲ್ಬಣಗೊಳ್ಳದ ರೀತಿಯಲ್ಲಿ ತಡೆಗಟ್ಟಲು ಎಲ್ಲಾ ಪ್ರಯತ್ನ ಮಾಡಲಾಗಿದೆ.

ಅಧ್ಯಕ್ಷರು:– ಈಗ ಪ್ರಕಟಣೆ, ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳ ಪ್ರಯಾಣ ದರ ಏರಿಕೆ ಬಗ್ಗೆ ಪರಿಶೀಲನಾ ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ. ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು 7 ಗಂಟೆ 10 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 16ನೇ ಮಾರ್ಚ್ 1993ರ ಮಂಗಳವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲ ಎಂದು ಸೂಚಿಸುತ್ತದೆ).